ಆ) ನೌಕರಿಯ ಬದಲಾಗಿಪ್ರತಿ ಕುಟುಂಬಕ್ಕೆ
ರೂ. 1.90 ಲಕ್ಷಗಳಂತೆ ಪರಿಹಾರವನ್ನು ನೀಡಿರುವುದು. : 328

ಇ) ಪರಿಹಾರದ ಭಾಗಶ:(ರೂ. 1.5 ಲಕ್ಷ)
ಪಾವತಿಸಿರುವುದು. : 06

ಈ) ಪರಿಹಾರ ಪಡೆದಿಲ್ಲದವರು : 12 ಪ್ರಕರಣ
494

ಊ) ಉದ್ಭವಿಸುವುದಿಲ್ಲ.

433(733) ಶ್ರೀ. ಕೃಷ್ಣ ಪಾಲೇಮಾರ್. ಜಿ (ಸುರತ್ಕಲ್) ಮಾನ್ಯ ಜವಳಿ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಎರಡು ವರ್ಷಗಳಲ್ಲಿ ಕೈಮಗ್ಗ ನೇಕಾರರ ಸಾಲವನ್ನು ಮನ್ನಾ ಮಾಡಲು ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು?

ಆ) ಒಟ್ಟಾರೆ ಕೈಮಗ್ಗ ಹಾಗೂ ನೇಕಾರರ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ಹಣ ಎಷ್ಟು?

ಅ) ಯಾವುದೂ ಇಲ್ಲಾ

ಶ್ರೀ ಸತೀಶ್.ಎಲ್.ಜಾರಕಿ ಹೊಳೆ (ಜವಳಿ ರಾಜ್ಯ ಸಚಿವರು)

ಆ)

ವರ್ಷ	(ರೂ. ಲಕ್ಷಗಳುಲ್ಲಿ)
2003–04	636.89
2004–05	2405.22

(ದಿನಾಂಕ. 15–1–2005 ರವರೆಗೆ)

434(735) ಶ್ರೀ ಕೃಷ್ಣ ಪಾಲೇಮಾರ್ (ಸುರತಕಲ್) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಈ ಕೆಳಕಂಡ ಪ್ರಶ್ನೇಗಳಿಗೆ ಉತ್ತರಿಸುವರೆ.

ಅ) ರಾಜ್ಯದಲ್ಲಿ ಗುರುತಿಸಲಾಗಿರುವ ಒಟ್ಟು ಗೋವುಗಳ ತಳಿಗಳ ಸಂಖ್ಯೆ ಎಷ್ಟು:

ಆ) ಅವುಗಳಲ್ಲಿ ಎಷ್ಟು ಸಂಖ್ಯೆಯ ತಳಿಗಳು ಕ್ಷೀಣಿಸುತ್ತಿರುವುದನ್ನು ಗುರುತಿಸಲಾಗಿದ್ದೆ

ಇ) ಗೋವುಗಳ ತಳಿ ಸಂರಕ್ಷಣೆಗೆ ಸರ್ಕಾರದ ಕಾರ್ಯಕ್ರಮಗಳೇನು?

ಈ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಮತ್ತು ಖಾಸಗಿ ಗೋತಳಿ ಕೇಂದ್ರಗಳು ಕಾರ್ಯಾನಿರ್ವಹಿಸುತ್ತಿದೆ?

ಶ್ರೀ ಮಿರಾಜುದೀನ್ ಎಸ್. ಪಟೀಲ್(ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) 2003 ರ ಜಾನುವಾರು ಗಣತಿಯಲ್ಲಿ ಒಟ್ಟು 8 ಗೋ ತಳಿಗಳನ್ನು ರಾಜ್ಯದಲ್ಲಿ ಗುರುತಿಸಲಾಗಿದೆ.

ಆ) ಎಲ್ಲ ಸ್ಥಳೀಯ ಗೋ ತಳಿಗಳ ಸಂಖ್ಯೆ ಕ್ಷೀಣಿಸುತ್ತಿರುವುದು ಗುರುತಿಸಲಾಗಿದ್ದೆ.

ಇ) ಪ್ರಮುಖ ದೇಶಿಯ ತಳಿಗಳಾದ ಹಳ್ಳಿಕಾರ್, ಅಮೃತ ಮಹಲ್, ಖಿಲ್ಲಾರ್ ಮತ್ತು ದೇವಣಿ ಗೋವುಗಳ ಸಂರಕ್ಷಣೆ ಹಾಗೂ ಸಂವರ್ಧನೆಗಾಗಿ ಪ್ರತ್ಯೇಕ ತಳಿ ಅಭಿವೃದ್ಧಿ ಕ್ಷೇತ್ರಗಳನ್ನು ಸ್ಥಾಪಿಸಿ ಈ

ತಳಿಗಳ ಗುಣ ಲಕ್ಷಣಗಳನ್ನು ಸಂರಕ್ಷಿಸುವ ಜೊತೆಗೆ ಹಾಲು ಉತ್ಪಾದನಾ ಸಾಮಥ್ಯವನ್ನು ಹೆಚ್ಚಿಸಲು ಹಾಗೂ ಹೊರೆ ಎಳೆಯುವ ಶಕ್ತಿಯನ್ನು ಹೆಚ್ಚಿಸಲು ಆಯ್ದ ತಳಿಗಳ ಸಂವರ್ಧನೆಯನ್ನು ಸದರಿ ತಳಿಗಳ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದೆ.

ಶುದ್ಧ ತಳಿಗಳ ಮಿಶ್ರ ತಳಿ ಹಾಗೂ ದೇಶಿಯ ತಳಿಗಳ ಘನೀಕೃತ ವೀರ್ಯವನ್ನು ಗ್ರಾಮಾಂತರ ಪ್ರದೇಶದಲ್ಲಿನ ರೈತರು ದೇಶಿಯ ತಳಿ ಅಭಿವೃದ್ದಿಗಾಗಿ ರಾಜ್ಯಾದ್ಯಂತ ಇರುವ 3774 ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಕೃತಕ ಗರ್ಭದಾರಣ ಸೌಲಭ್ಯವನ್ನು ಸಹ ಒದಗಿಸಲಾಗಿದೆ.

ಕರ್ನಾಟಕ ಜಾನುವಾರು ಅಭಿವೃದ್ದಿ ಸಂಸ್ಥೆಯ ಸ್ಥಾಪನೆ.

ಗ್ರಾಮಾಂತರ ಪ್ರದೇಶದ ರೈತರಿಗೆ ಮಿಶ್ರ ತಳಿ ಹಾಗೂ ದೇಶಿಯ ತಳಿಗೋವುಗಳಲ್ಲಿನ ಗುಣ ಲಕ್ಷಣಗಳ ಬಗ್ಗೆ ಅಗ್ಗಿಂದಾಗ್ಗೆ ತರಬೇತಿ ಮೂಲಕ ತಳಿಗಳ ಸಂರಕ್ಷಣೆ ಹಾಗೂ ಅಭಿವೃದ್ದಿ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಈ) ರಾಜ್ಯದಲ್ಲಿ ಒಟ್ಟು 11 ಸರ್ಕಾರಿ ಗೋತಳಿ ಕೇಂಬ್ರಗಳು ಕಾರ್ಯನಿರ್ವಹಿಸುತ್ತಿವೆ. ಖಾಸಗಿ ಗೋತಳಿ ಸಂವರ್ಧನಾ ಕ್ಷೇತ್ರಗಳು ಮಾಹಿತಿ ಲಭ್ಯವಿಲ್ಲ.

435(737) ಶ್ರೀ.ಜಿ. ಕೃಷ್ಣ ಪಾಲೇಮಾರ್ ವಿಧಾನ ಸಭಾ ಸದಸ್ಯರು (ಸುರತ್ಕಲ್) ಮಾನ್ಯ ಬೃಹತ್, ಮಧ್ಯಮ,ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರಿನಲ್ಲಿ ವಿಶೇಷ ಆರ್ಥಿಕ ವಲಯ ಯೋಜನೆಯನ್ನು ರೂಪಿಸಲಾಗಿದೆಯೇ?

ಆ) ರೂಪಿಸಿದ್ದಲ್ಲಿ ಅದರ ವಿವರಗಳೆನು?

ಇ) ಇಲ್ಲವಾದಲ್ಲಿ ಸರ್ಕಾರದ ಭರವಸೆಯಂತೆ ಯೋಜನೆಯನ್ನು ರೂಪಿಸಿ ಯಾವಾಗ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಪಿ.ಜಿ. ಆರ್. ಸಿಂಧ್ಯ (ಬೃಹತ್, ಮಧ್ಯಮ,ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಮೆ.ಕೆನರಾ ಛೇಂಬರ್ ಆಫ್ ಕಾಮರ್ಸ ಮತ್ತು ಇಂಡಸ್ಟ್ರೀ, ಮಂಗಳೂರಿನಲ್ಲಿ ಒಂದು ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪಿಸುವ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಈ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ ಮೇರೆಗೆ ಯೋಜನೆಗೆ ಕೇಂದ್ರ ಸರ್ಕಾರದ ತಾತ್ವಿಕ ಅನುಮೋದನೆಯನ್ನು ದಿನಾಂಕ 8.8.2003ರಂದು 1 ವರ್ಷದ ಅವಧಿಗೆ ನೀಡಲಾಯಿತು. ತದನಂತರ ಅನುಮತಿಯನ್ನು ದಿನಾಂಕ 8.2.2005ರವರೆಗೆ ವಿಸ್ತರಿಸಲಾಗಿದೆ.

ಆ) ಅನುಮೋದಿತ ಯೋಜನೆಯನ್ವಯ ಮಂಗಳೂರಿನಲ್ಲಿ 1,350 ಏಕರೆ ಪ್ರದೇಶದಲ್ಲಿ ರೂ.710 ಕೋಟಿ ವೆಚ್ಚದಲ್ಲಿ ಕರಾವಳಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಲು ಉದ್ದೇಶಿಸಲಾಯಿತು. ಈ ಯೋಜನೆಯನ್ನು ಅರ್ಹ ಖಾಸಗಿ ಬಂಡವಾಳ ಹೂಡಿಕೆದಾರರ ಸಹಭಾಗಿತ್ವದೂಂದಿಗೆ ಕಾರ್ಯಗತಗೂಳಿಸಲು ಉದ್ದೇಶಿಸಲಾಯಿತು.

ತದನಂತರ ಮೆ.ಆಯಿಲ್ ಮತ್ತು ನ್ಯಾಚುರಲ್ ಗ್ಯಾಸ್ ಕಾರ್ಪೂರೇಷನ್ ಲಿ.,[ONGC] ರವರು ಮಂಗಳೂರಿನಲ್ಲಿ ನೈಸರ್ಗಿಕ ಅನಿಲ ಆಮದು ಸ್ಥಾವರ, ಅನಿಲ ಸಾಗಾಣಿಕೆ ಪೈಪ್‌ಲೈನ್